**ವ್ಯಾಖ್ಯಾನ**

# <u>ಪರಮಪುರಷ ಪರಿಪೂರ್ಣ ಸುಳಾದಿ</u>

**Ref.**: Purandara Chintanaa Lahari by Dr.A.B. Shyamachar, published by Sri Srinivasa Utsava Balaga ®, Bengaluru – 560019, page No. 76.

**ಶ್ರೀ ಪುರಂದರ ದಾಸರ ಸುಳಾದಿ ಚಿಂತನೆ:**

ಶ್ರೀವಿಜಯದಾಸರು ದಾಖಲಿಸಿರುವಂತೆ ತಮ್ಮ ಗುರುಗಳಾದ ಶ್ರೀಪುರಂದರದಾಸರು ರಚಿಸಿರುವ ಒಟ್ಟು ಸುಳಾದಿಗಳು 90 ಸಾವಿರ. ಆದರೆ ದುರ್ದೈವವೆಂದಂತೆ ಒಟ್ಟು ಉಪಲಬ್ಧ ಕೃತಿಗಳು ಸುಮಾರು ಎರಡು ಸಾವಿರ ಮಾತ್ರ. ಅದರಲ್ಲಿ ಸುಳಾದಿ ಪ್ರಕಾರದ ಕೃತಿಗಳು ಸುಮಾರು 90 ಮಾತ್ರ. ದಾಸರ ಉಳಿದ ಕೃತಿಗಳ ಅರ್ಥೈಸಿ – ಅನುಸರಿಸಿ ತಿಳಿದು ಬಾಳಲು ಕೆಲ ಜನುಮಗಳೂ ಸಾಲವು ಎಂಬುದು ಸತ್ಯ ಸಂಗತಿ. ಇಲ್ಲಿ ಒಂದು ಸುಳಾದಿಯನ್ನು ತಿಳಿಯುವ ಪ್ರಯತ್ನ ನಡೆದಿದೆ.

ಎಲ್ಲ ಶಾಸ್ತ್ರಗಳಲ್ಲಿ ಅಡಗಿರುವ ಪ್ರಧಾನ ತತ್ತ್ವ ಪರಬ್ರಹ್ಮನೆನಿಸಿದ ಶ್ರೀಹರಿಯ ಪಾರಮ್ಯವನ್ನು ತಿಳಿಯುವುದು, ಜೀವ–ಜಗತ್ತಿನ ಅಸ್ತಿತ್ವವನ್ನರಿತು ಈಶ–ಜೀವರ ಸಂಬಂಧ ಅನುಬಂಧಗಳನ್ನು ಅರಿಯುವುದಾಗಿದೆ. ಪುರುಷೋತ್ತಮನೆನಿಸಿದ ಶ್ರೀಹರಿಯು ಸರ್ವಗುಣಪೂರ್ಣನಾಗಿ, ಸಮಸ್ತ ದೋಷಗಳಿಂದ ದೂರನಾದವನು. ಸ್ವತಂತ್ರನೆನಿಸಿದ ಇವನೇ ಸೃಷ್ಟ್ಯಾದಿ ಅಷ್ಟಕರ್ತ. ಸರ್ವನಿಯಾಮಕನಾಗಿ ಸಮಸ್ತ ಮುಕ್ತಾಮುಕ್ತ ಜೀವರ ಅಂತಸ್ಥನಾಗಿರುವ. ಹೀಗೆ ವೇದವೇದ್ಯನಾದ ಭಗವಂತನು ಸರ್ವಾಯವಗಳಿಂದಲೂ ಪೂರ್ಣನೆಂಬ ಮಹದ್ಗುಣವನ್ನು ಶ್ರೀಪುರಂದರದಾಸರು ತಮ್ಮ ಒಂದು ಸುಳಾದಿಯಲ್ಲಿ ನಿರೂಪಿಸಿರುವುದನ್ನು ನೋಡಬಹುದು.

**ರಾಗ: ಹರಿ**

**ಧ್ರುವ ತಾಳ**

**ಪದ ನಖ ಪರಿಪೂರ್ಣ ಜಾನು ಜಂಘ ಪರಿಪೂರ್ಣ**

**ಊರು ಕಟಿ ಪರಿಪೂರ್ಣ ಜಘನಾ ಪರಿಪೂರ್ಣ**

**ಉದರ ತ್ರಿವಳಿ ವಕ್ಷಬಾಹು ಪರಿಪೂರ್ಣ**

**ಪದುಮ ಗದೆ ಚಕ್ರ ಶಂಖ ಪರಿಪೂರ್ಣ**

**ವದನ ಪರಿಪೂರ್ಣ ಕಂಬುಕಂಠ ಪರಿಪೂರ್ಣ**

**ಸರ್ವಾಂಗ ಪರಿಪೂರ್ಣ ಪುರಂದರವಿಠಲ ಸರ್ವಾಂಗ ಪರಿಪೂರ್ಣ** ॥ 1 ॥

ಶ್ರೀವೇದವ್ಯಾಸರು ಬ್ರಹ್ಮಸೂತ್ರಗಳಲ್ಲಿ ನಿರ್ಣಯಿಸಿದ ವಿಷಯವನ್ನು ಶ್ರೀಪುರಂದರದಾಸರು ಎಲ್ಲರೂ ಅರಿಯುವಂತೆ ಸುಲಭ ಶೈಲಿ ಹಾಗೂ ಆಡುಭಾಷೆಯಲ್ಲಿ ಭಗವಂತನ ವಿಶಿಷ್ಟ ಗುಣಗಳನ್ನು ಹೀಗೆ ತಿಳಿಸಿದರು. ಭಗವಂತನ ಶರೀರವೇ ಅಪ್ರಾಕೃತವಾದದ್ದು. ಅವನು ಗುಣಗಳಿಗೂ ಅವನ ಸರ್ವಾಂಗಗಳಿಗೂ ಅಭೇದ. ಇದನ್ನೇ ಸ್ವಗತ ಭೇದ ವಿವರ್ಜಿತ ಎಂದು ಶಾಸ್ತ್ರಗಳು ಸಾರಿದವು. ಮತ್ತು **'ನೇಹನಾನಾಸ್ತಿಕಿಂಚನ'** ಎಂದಾಗಿದೆ.

ಭಗವಂತನ ಎಲ್ಲ ಅಂಗಾಂಗ ಅವಯಗಳಿಗೂ ಭೇದವೆಂಬುದಿಲ್ಲ. ಅಲ್ಲದೆ ಎಲ್ಲವೂ ಸಚ್ಚಿದಾನಂದಮಯವಾಗಿ ಆನಂದಜ್ಞಾನದೇಹವೆನಿಸಿದ. ಪ್ರತಿಯೊಂದು ಗುಣಗಳೂ ಅನಂತ ಹಾಗೂ ಪರಿಪೂರ್ಣ. ಪ್ರಾಕೃತ ಗುಣಗಳಾದ ಸತ್ವ–ರಜಸ್–ತಮಸ್‌ಗಳಾಗಿರದೆ ಅಪ್ರಾಕೃತ ದೇಹಿ ಎನಿಸಿರುವ. ಅದಕ್ಕೆ ಮಹಾವಿಷ್ಣುವನ್ನು ನಿರ್ಗುಣನೆಂದು ಸಂಭೋದಿಸಿದೆ. ಇಲ್ಲಿ ದಾಸರು ವಿವರವಾಗಿ ಎಲ್ಲರಿಗೂ ತಿಳಿಸಲೆಂದು ಅವಯವಗಳನ್ನು ಉಲ್ಲೇಖಿಸಿ ಪರಿಪೂರ್ಣವಾಗಿವೆ ಎಂದು ಮಂಡಿಸಿದರು. ಭಗವಂತನ ಅವಯವಗಳಂತೆ ತನ್ನ ಆಯುಧಗಳೂ ಅವನಿಂದ ಅಭೇದ ಉಳ್ಳದ್ದಾಗಿ ಪರಿಪೂರ್ಣವಾಗಿವೆ. ವೇದಗಳಲ್ಲಿ **'ಅಣೋರಣೀಯ ಮಹತೋ ಮಹೀಯಾನ್'** ಎನಿಸಿದ ಭಗವಂತ ಅಣುವಾಗಿ ಪರಿಪೂರ್ಣ ಮಹತ್ತಾಗಿಯೂ ಪರಿಪೂರ್ಣ. ಅಣುವಿನ ಅಂತಸ್ಥನಾಗಿ ಮಹತ್ತಿನ ಅಂತಸ್ಥನಾಗಿ ಪರಿಪೂರ್ಣನೆನಿಸಿ ಸರ್ವವ್ಯಾಪ್ತನಾಗಿರುವ ಇದು ಭಗವಂತನಲ್ಲಿ ಮಾತ್ರ ನಿಷ್ಟವಾದ ಧರ್ಮವಾಗಿದೆ. ಇಲ್ಲಿ ದಾಸರು ಸುಂದರವಾಗಿ ಸರ್ವಾವಯವ ಪರಿಪೂರ್ಣತ್ವದ ಮಹತ್ವವನ್ನು ಬಿಂಬಿಸಿರುವರು.

**ಮಟ್ಟ ತಾಳ**

**ಹಮ್ಮು ಪರಿಪೂರ್ಣ ಮನ್ನೈ ಪರಿಪೂರ್ಣ**

**ತುಮ್ಮ ಪರಿಪೂರ್ಣ ಬುದ್ಧಿ ಪರಿಪೂರ್ಣ**

**ಚಿತ್ಸುಖ ಪರಿಪೂರ್ಣ ಪುರಂದರವಿಠಲ ಹಮ್ಮು ಪರಿಪೂರ್ಣ** ॥ 2 ॥

ಶ್ರೀಕೃಷ್ಣ ಗೀತೆಯಲ್ಲಿ **'ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ'** 'ನನಗಿಂತ ಮಿಗಿಲಾದ ಮತ್ತೊಂದು ಶ್ರೇಷ್ಠವಾದ ವಸ್ತು ಎಂಬುದಿಲ್ಲ', ಎಂದು ಹೇಳಿದ. ಅವನೇ ಹೇಳಬೇಕಾದ ಮಾತು ಇದಾಗಿದೆ. ಇದನ್ನು ಹಮ್ಮು ಎಂದರು. **'ಅಹಂ ಸರ್ವಸ್ಯ ಪ್ರಭವಃ'** ಎಲ್ಲಕ್ಕೂ ಪ್ರಭುವಾದ ವಿಭುವು ಅವನೇ ತಾನೆ. ಸರ್ವಕರ್ತೃತ್ವದ ಅಹಂ ಎಂಬುದು ಭಗವಂತನಲ್ಲಿ ಪರಿಪೂರ್ಣವಾಗಿದೆ. ಭಗವಂತನಲ್ಲಿಯ ಮನಾದಿಗಳು – ಮಾನಾದಿಗಳು ಎಲ್ಲವೂ ಪರಿಪೂರ್ಣ. ಭಗವಂತನ ತಿಳುವಳಿಕೆ, ಜ್ಞಾನ–ವಿಜ್ಞಾನಗಳು ಪರಿಪೂರ್ಣ, ಶ್ರೀಹರಿಯ ಸ್ವಭಾವ ಹಾಗೂ ಪ್ರಮಾ ಪರಿಪೂರ್ಣ. ಸಚ್ಚಿದಾನಂದ ಮೂರ್ತಿಯಾದ ಭಗವಂತನ ಸತ್–ಚಿತ್–ಆನಂದಗಳೂ ಪರಿಪೂರ್ಣ ಮತ್ತು ಆನಂದಮಯವಾಗಿ ಪರಿಪೂರ್ಣತೆ ಉಳ್ಳದ್ದೆಂದು ಸಕಲ ಶಾಸ್ತ್ರಗಳು ಸಾರುತ್ತವೆ. ಇದು ಭಗವಂತನ ಮಹಿಮಾದ್ಯೋತಕ ಪರಿಪೂರ್ಣ ಗುಣಗಳಾಗಿವೆ.

**ಝಂಪೆ ತಾಳ**

**ಅನಂತ ಬಾಹುವಾಗಿ ಅನಂತ ಚಕ್ಷುವಾಗಿ**

**ಅನಂತ ಕಲ್ಪದಲ್ಲಿ ಅನಂತ ನಾಮ**

**ಶ್ರೀಪುರಂದರವಿಠಲನ ಅನಂತ ಅವತಾರಗಳು ಪರಿಪೂರ್ಣ** ॥ 3 ॥

ಅರ್ಜುನ ಯುದ್ಧ ಭೂಮಿಯಲ್ಲಿ ವಿಶ್ವರೂಪವನ್ನು ಕಂಡು ಅಂದ ಮಾತನ್ನು ಇಲ್ಲಿ ಸಂಗ್ರಹಿಸಿದಂತಿದೆ. **'ಅನೇಕ ಬಾಹೂದರವಕ್ತ್ರನೇತ್ರಂ । ಪಶ್ಯಾಮಿ ತ್ವಾಂ ಸರ್ವತೋ ಅನಂತರೂಪಮ್'** ॥ ಗಣಿಸಲಾಗದಷ್ಟು ತೋಳುಗಳನ್ನು ಉದರ–ಮುಖ, ಕಣ್ಣುಗಳನ್ನು ಹೊಂದಿರುವ ಅನಂತರೂಪಗಳನ್ನು ಎಲ್ಲೆಡೆ ಕಾಣುವೆನು ಎಂದು ಹೇಳಿದಂತೆ ದಾಸರು ಇಲ್ಲಿ ಭಗವಂತನ ಆನಂತ್ಯವನ್ನು ಪರ್ಣಿಸಿರುವರು. ಶ್ರೀಮದಾಚಾರ್ಯರು **'ಸರ್ವಾನಿ ನಾಮಾನಿ ಯಮಾವಿಶಂತಿ'** ಎಂದಂತೆ ಸಮಸ್ತ ವರ್ಣಾತ್ಮಕ–ಧ್ವನ್ಯಾತ್ಮಕ ವರ್ಣಗಳು, ಪದಗಳು, ವಾಕ್ಯ ಸಮುದಾಯ, ಶಬ್ದ ಇವೇ ಮೊದಲಾದ ಎಲ್ಲವೂ ಭಗವದ್ವಾಚಕಗಳಾಗಿವೆ. ಇದು ಕೇವಲ ಒಂದು ಕಾಲಕ್ಕೆ ಸೀಮಿತವಲ್ಲ. ಅನಂತ ಕಲ್ಪದಲ್ಲೂ ಅನಂತನಾಮಗಳು ಭಗವಂತನನ್ನು ಅನಂತವಾಗಿ ಕೊಂಡಾಡುತ್ತವೆ. ಸಕಲ ಶಬ್ದಗಳಿಂದಲೂ ವಾಚ್ಯನಾದವನು ಅವನೇ ಆಗಿ ಅನಂತ ಶಬ್ದವಾಚ್ಯನೆನ್ನಿಸುವ. ಭಗವಂತನ ಅನಂತ ರೂಪಗಳು – ಅವತಾರಗಳೂ ನಿತ್ಯ ಕಣ್ಣಿಗೆ ಗೋಚರನೆಂದರೆ ಪ್ರಾದುರ್ಭಾವ. ಈ

ಅನಂತ ಅವತಾರಗಳೂ ಅನಾದಿ ಹಾಗೂ ನಿತ್ಯ. ಅಷ್ಟೇ ಅಲ್ಲದೇ ಎಲ್ಲ ಅವತಾರಗಳೂ ಪರಿಪೂರ್ಣವಾದದ್ದಾಗಿದೆ. **'ಪೂರ್ಣಃ ಪೂರ್ಣಮಿದಂ....'** ಎಂದಂತೆ ಭಗವಂತ ಸರ್ವದಾ ಪರಿಪೂರ್ಣನಾದವನು.

**ಅಟ್ಟ ತಾಳ**

**ಶ್ರೋತುರ ನೇತುರ ಘ್ರಾಣತ್ವಗ್ರಸನವ**
**ಪಾಣಿ ಪಾದ ಪಾಯೋಪಸ್ಥಾದಿ ಈರೈದು**
**ಮಾತರಿಶ್ವಪ್ರಿಯ ಪುರಂದರವಿಠಲನ**
**ಜ್ಞಾನ ಕರ್ಮೇಂದ್ರಿಯಗಳು ಪರಿಪೂರ್ಣ** ॥ **4** ॥

ಇಲ್ಲಿಯು ಶ್ರೀಕೃಷ್ಣ ಅರ್ಜುನನಿಗೆ ತೋರಿದ ವಿಶ್ವರೂಪದ ಪರಿಕಲ್ಪನೆಯನ್ನು ಸ್ಮರಿಸಬಹುದಾಗಿದೆ. ಭಗವಂತನ ಅಪ್ರಾಕೃತವಾದ ಸಚ್ಚಿದಾನಂದಾತ್ಮಕ ದೇಹದ ಸಕಲ ಅವಯವಗಳೂ ಪರಿಪೂರ್ಣನೆಂದು ಶಾಸ್ತ್ರಗಳ ಮತಿಥಾರ್ಥವನ್ನು ತೋರಿದರು. ಶ್ರೀಹರಿಯ ಸಕಲ ಕರ್ಮೇಂದ್ರಿಯಗಳು ಜ್ಞಾನೇಂದ್ರಿಯಗಳು ಎಲ್ಲವೂ ಪರಿಪೂರ್ಣವೆಂದು ತಿಳಿಸಿದ ದಾಸರು ಭಗವಂತನ ಅಚಿಂತ್ಯಾದ್ಭುತ ಶಕ್ತಿಯನ್ನು ಬಣ್ಣಿಸುವರು.

ಭಗವಂತನ ವಿಷಯದಲ್ಲಿ ಬಾಹ್ಯ–ಅಂತರವೆಂಬುದಿಲ್ಲ. ಒಳಗೆ–ಹೊರಗೆ ಎಂದಾಗಲಿ ಮೇಲೆ–ಕೆಳಗೆ ಎಂದಾಗಲಿ ಇರದು. ಸರ್ವವ್ಯಾಪ್ತನಾದ ಶ್ರೀಹರಿ ಎಲ್ಲೆಲ್ಲು ಪರಿಪೂರ್ಣನೆಂದೆನಿಸಿ ಆವರಿಸಿರುವನು. ಭಗವಂತ ಇದ್ದಲ್ಲೆಲ್ಲಾ ವಾಯುದೇವರೂ ಅನುಚರರಾಗಿ, ಪ್ರತಿಬಿಂಬರೆನಿಸಿ ಸನ್ನಿಹಿತರಾಗಿರುವರು. ಈ ತತ್ತ್ವವನ್ನು ದಾಸರು ಸುಂದರನಾಗಿ ಸಂಗ್ರಹಿಸಿರುವುದನ್ನು ಕಾಣಬಹುದು.

**ಏಕತಾಳ**

**ಆವಾವ ದೇಶದಲ್ಲಿ ಆವಾವ ಕಾಲದಲ್ಲಿ**
**ಆವಾವ ಜೀವರಲ್ಲಿ ಶ್ರೀವಲ್ಲಭ**
**ಪುರಂದರವಿಠಲ ಪರಿಪೂರ್ಣ** ॥ **5** ॥

ಪ್ರಳಯ ಕಾಲದಲ್ಲಿಯೂ ಭಗವಂತ ಸ್ವರಮಣನಾಗಿ ಆನಂದದಿ ಆಲದೆಲೆಯ ಮೇಲೆ ಪವಡಿಸುವ ಶ್ರೀಹರಿಗೆ ಯಾವ ದೇಶ ಕಾಲಗಳ ನಿರ್ಬಂಧಗಳೂ ಇಲ್ಲ. ಎಲ್ಲ ದೇಶ ಕಾಲಗಳ ಪ್ರತಿಪಾದ್ಯನು ಮೀರಿದವನು, ನಿಯಾಮಕನು ಆದ ಭಗವಂತ ಎಲ್ಲೆಲ್ಲೂ ತುಂಬಿರುವ. **'ಕಾಲಾಚ್ಚ ದೇಶಗುಣತೋಽಸ್ಯ ನ ಚಾದಿರಂತೋ...'** ಸರ್ವೋತ್ತಮನಾದ ಭಗವಂತನಿಗೆ ಕಾಲದಿಂದಾಗಲಿ ದೇಶಗುಣಗಳಿಂದಾಗಲಿ ಕೊನೆ ಮೊದಲೆಂಬುದಿಲ್ಲ. ಅದಕ್ಕೆ ಇವನನ್ನು **'ಪೂರ್ಣಗುಣವಿಗ್ರಹ ಆತ್ಮತಂತ್ರಃ'** ಎಂದು ಸಂಬೋಧಿಸಿರುವರು. ಮುಕ್ತಾಮುಕ್ತ ಸಮಸ್ತ ಜೀವರಲ್ಲೂ ಬಿಂಬ ಮೂರುತಿಯಾಗಿ ಸರ್ವಾವಸ್ಥೆಗಳಲ್ಲೂ ಪರಿಪೂರ್ಣನಾಗಿರುವ.

**ಜತೆ :**

**ಅರಸೇ ಇಂದಿರೆ ಪರಿಪೂರ್ಣ ಪುರಂದರವಿಠಲ ।**
**ಸರಸಿಜೋದ್ಭವ ಶರ್ವಾದಿಗಳಲ್ಲಿ ಅಪೂರ್ಣರು ॥ 6 ॥**

ಇಂತಹ ಪರಿಪೂರ್ಣ ವಿಗ್ರಹನಾದ ಭಗವಂತನಿಂದ ಆಶ್ರಿತಳಾಗಿ ಮಡದಿ ಎನಿಸಿದವರು ಇಂದಿರಾದೇವಿನಾಮಕ ಮಹಾಲಕ್ಷ್ಮೀ. ಶ್ರೀರಮಣನಾದ ಪುರಂದರವಿಠಲನು ಪರಿಪೂರ್ಣ ಗುಣಪೂರ್ಣ. ಬ್ರಹ್ಮ ವಾಯು ರುದ್ರೇಂದಾದಿ ಸಮಸ್ತ ಜೀವಕೋಟಿಯು ಅಪೂರ್ಣರು. ಭಗವಂತನ ಅನುಚರರು– ಸೇವಕರು. ಶ್ರೀಹರಿಯ ಆಜ್ಞಾಧಾರಕರಾಗಿ ಅವರವರ ನಿಯತ ಕಾರ್ಯಗಳನ್ನು ಭಗವಂತನ ಆಜ್ಞೆಯಂತೆ ಮಾಡುವವರು.

ಹೀಗೆ ಭಗವಂತನ ಸರ್ವಾವಯಗಳು ಸರ್ವಕಾಲಕ್ಕೂ ಸರ್ವಗುಣಗಳಿಂದಾ ಪರಿಪೂರ್ಣವಾಗಿವೆ. ಈ ಅದ್ಭುತ ಪರಿಕಲ್ಪನೆಯನ್ನು ಶಾಸ್ತ್ರೋಕ್ತ ರೀತಿಯಿಂದ ದಾಸರು ತಮ್ಮ ವೈಶಿಷ್ಟ್ಯ ಪರಿಪೂರ್ಣ ಮಾತುಗಳಿಂದ ಈ ಸುಳಾದಿಯಲ್ಲಿ ಬಣ್ಣಿಸಿ ಉಪಕಾರ ಮಾಡಿರುವರು.

## ಶ್ರೀ ಕೃಷ್ಣಾರ್ಪಣಮಸ್ತು